# ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆ

**ದೀಪಾ. ಮ. ಅಂಗಡಿ**
ಎಂ. ಎ. ವಿದ್ಯಾರ್ಥಿನಿ, ಸರಕಾರಿ ಪ್ರಥಮದರ್ಜೆ ಮಹಿಳಾ ಪದವಿ ಮಹಾವಿದ್ಯಾಲಯ,
ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರ, ಬೈಲಹೊಂಗಲ.

**DOI: https://doi.org/10.5281/zenodo.18700780**

**ABSTRACT:**

ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆ ಪ್ರಮುಖ ಅಂಶವಾಗಿ ಹೊರಹೊಮ್ಮಿದೆ. ಪುರಾತನ ಕಾಲದಿಂದ ಮಹಿಳೆಯನ್ನು ಸಮಾಜವು ಚಾರಿತ್ರಿಕ ದಾಖಲೆಗಳಿಂದ ದೂರವಿಟ್ಟು ಮೌನಗೊಳಿಸಿದ್ದರೆ, ಆಧುನಿಕ ಕಾಲದಲ್ಲಿ ಆಕೆ ತನ್ನ ಸ್ವರವನ್ನು ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧ ಎತ್ತಿಕೊಂಡಿದ್ದಾಳೆ. ತನ್ನ ಬದುಕಿನ ನೋವು, ಸಂಕಟ, ಅನ್ಯಾಯ, ಶೋಷಣೆ ಮತ್ತು ಪ್ರತಿರೋಧವನ್ನು ಕಾವ್ಯದ ಮೂಲಕ ವ್ಯಕ್ತಪಡಿಸುತ್ತಾಳೆ. ಮಹಿಳಾ ಕಾವ್ಯವು ಕೇವಲ ಪುರುಷ ವಿರೋಧಿ ಧೋರಣೆಯಲ್ಲ, ಬದಲಿಗೆ ತನ್ನ ಅಸ್ತಿತ್ವವನ್ನು ದೃಢಪಡಿಸುವ, ಬದುಕನ್ನು ತನ್ನ ದೃಷ್ಟಿಕೋನದಿಂದ ನೋಡುವ ಸಾಹಿತ್ಯದ ಹಾದಿಯಾಗಿದೆ. ಆಧುನಿಕ ಮಹಿಳಾ ಕವಿಗಳು ತಮ್ಮ ಕಾವ್ಯದಲ್ಲಿ ಮಹಿಳೆಯರ ಶೋಷಣೆ, ಲೈಂಗಿಕ ದೌರ್ಜನ್ಯ, ಭಯ, ಸಾಮಾಜಿಕ ಅನ್ಯಾಯ, ಪುರುಷರ ದಬ್ಬಾಳಿಕೆ ಮುಂತಾದವುಗಳ ಬಗ್ಗೆ ಕಳವಳವನ್ನು ಬಿಂಬಿಸುತ್ತಾರೆ. ಈ ಸಾಹಿತ್ಯ ಮಹಿಳೆಯ ಆತ್ಮವಿಶ್ವಾಸಕ್ಕೆ, ಸಾಮಾಜಿಕ ಹೋರಾಟಕ್ಕೆ ಮತ್ತು ಸಾಹಿತ್ಯದ ಪ್ರಾಧಾನ್ಯತೆಗೂ ದಾರಿ ತೋರಿಸುತ್ತದೆ.

**KEYWORDS:**

ಸ್ತ್ರೀ ಸಂವೇದನೆ, ಆಧುನಿಕ ಕಾವ್ಯ, ಶೋಷಣೆ, ಸಾಮಾಜಿಕ ಹೋರಾಟ, ಸ್ತ್ರೀವಾದ, ಕಥೆ-ಕಾದಂಬರಿಗಳು, ಮಹಿಳಾ ಸಾಹಿತ್ಯ, ಮಹಿಳೆಯರ ಸ್ವಾತಂತ್ರ್ಯ.

ಕವಿರಾಜ ಮಾರ್ಗದಿಂದ ಆರಂಭವಾಗಿರುವ ಕನ್ನಡ ಸಾಹಿತ್ಯ ಬಹುಪ್ರಕಾರವಾಗಿ ಬೆಳೆದು ಹಬ್ಬಿ ಮುನ್ನುಗ್ಗುತ್ತಿದೆ. ಪದ್ಯ, ಗದ್ಯ, ಚಂಪೂ, ವಚನ, ಕೀರ್ತನೆ, ಸುಳಾದಿ, ಉಗಾಭೋಗ, ತತ್ವಪದಗಳು, ಜನಪದ ಹಾಡು, ಕಥೆ, ಒಡಪು, ಗಾದೆ, ಬಯಲಾಟ ಮುಂತಾದ ಪ್ರಕಾರಗಳಲ್ಲಿ ಹರಿದು ಬಂದಿದೆ. ಹೊಸಗನ್ನಡದಲ್ಲಿಯೂ ಇವು ಮುಂದುವರೆಯುವುದರ ಜೊತೆಗೆ ಭಾವಗೀತೆ, ನಾಟಕ, ವಿಮರ್ಶೆ, ಕಥೆ, ಕಾದಂಬರಿ, ಪ್ರಬಂಧ ಇಂತಹ ಹಲವು ಪ್ರಕಾರಗಳಲ್ಲಿ ಹೆಜ್ಜೆ ಇಡುತ್ತಿದೆ. ಸಮಾಜದ ಅರ್ಧದಷ್ಟಿರುವ ಹೆಣ್ಣನ್ನು ಬಿಟ್ಟು ಸಾಹಿತ್ಯ ರಚನೆ ಕೂಡ ಅಪೂರ್ಣವೇ ಎನಿಸುತ್ತದೆ. ಆದ್ದರಿಂದ ಹೆಣ್ಣು ಸಾಹಿತ್ಯದಲ್ಲಿ ಎಂದಿನಿಂದಲೂ ಸ್ಥಾನ ಪಡೆದಿದ್ದಾಳೆ. ಯಾವ ನೆಲೆಯಲ್ಲಿ ಅವಳ ಸ್ಥಾನವಿದೆ, ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಹೇಗೆ ಮೂಡಿಬಂದಿದೆ ಎಂಬುದರ ಚರ್ಚೆ ಅವಶ್ಯವಾಗಿದೆ. ಈ ದಾರಿಯಲ್ಲಿ 21ನೇ ಶತಮಾನದಲ್ಲಿ ರೂಪುಗೊಂಡಿರುವ ಕಥಾಸಾಹಿತ್ಯದಲ್ಲಿ ಕಥಾಸಾಹಿತ್ಯ ಬಹಳ ವಿಸ್ತಾರವಾಗಿದ್ದು, ಸಣ್ಣಕಥೆಗಳಲ್ಲಿ ಸ್ತ್ರೀ ಸಂವೇದನೆ ಬಹಳ ವಿಸ್ತಾರವಾಗಿದೆ.

ಕಾವ್ಯಗಳಲ್ಲಿ ಕಥಾ ಹರಿವು ಇದ್ದೇ ಇತ್ತು. ಜನಪದ ಸಾಹಿತ್ಯದಲ್ಲಿಯೂ ಕಥೆಗಳು ಪ್ರಮುಖ ಸ್ಥಾನವನ್ನೇ ಆವರಿಸಿದ್ದವು. ಆದರೂ ಕಥೆಯೇ ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದದ್ದು ಮಾತ್ರ ಪಾಶ್ಚಾತ್ಯ ಪ್ರಭಾವದಿಂದ ಮೂಡಿದ ಹೊಸಗನ್ನಡ ಸಾಹಿತ್ಯದಲ್ಲಿ. ಕಥೆಗಳಲ್ಲಿ ಸಣ್ಣಕಥೆ, ನೀಳ್ಗತೆ, ಕಾದಂಬರಿ, ಇತ್ತೀಚೆಗೆ ಮೈಕ್ರೋ ಕಥೆಗಳು ಅಂದರೆ ಒಂದು

ವಾಕ್ಯದಲ್ಲಿ ಹೇಳುವ ಕಥೆಗಳ ರಚನೆಯನ್ನು ಕಾಣಬಹುದು. "ನವೋದಯ ಸಾಹಿತ್ಯ ಕಾಲಘಟ್ಟದಲ್ಲಿ ಮೊದಲ ಬಾರಿಗೆ 'ಪಂಜೆ ಮಂಗೇಶರಾಯರು' 'ನನ್ನ ಚಿಕ್ಕತಾಯಿ' ಎಂಬ ಸಣ್ಣಕಥೆಯನ್ನು ಕನ್ನಡದಲ್ಲಿ ಪ್ರಕಟಿಸಿದರು. ಅವರ ಕಮಲಾಪುರದ ಹೋಟೆಲ್‌ನಲ್ಲಿ ಕಥೆಯು ಸಣ್ಣ ಕಥೆಗಳನ್ನು ಕನ್ನಡಕ್ಕೆ ಪರಿಚಯಿಸಿತು. 'ಮಾಸ್ತಿ ವೆಂಕಟೇಶ ಅಯ್ಯಂಗಾರ್' ಅವರು ಸಣ್ಣ ಕಥೆಗಳನ್ನು ತಮ್ಮ ಸಾಹಿತ್ಯದ ಮಾಧ್ಯಮವಾಗಿಸಿಕೊಂಡು ಕಥಾಸಂಕಲನಗಳನ್ನು ಪ್ರಕಟಿಸುವ ಮೂಲಕ 'ಕನ್ನಡದ ಸಣ್ಣಕಥೆಗಳ ಜನಕ' ಎನಿಸಿಕೊಂಡರು. ಬೆಟಗೇರಿ ಕೃಷ್ಣಶರ್ಮ, ದ.ರಾ. ಬೇಂದ್ರೆ, ಶಿವರಾಮ ಕಾರಂತ, ಕುವೆಂಪು ಮುಂತಾದವರಿಂದ ನವೋದಯ ಸಾಹಿತ್ಯ ಪರಂಪರೆಯ ಕಥೆಗಳು ರೂಪುಗೊಂಡವು. ಈ ಕಾಲಘಟ್ಟದಲ್ಲಿ ಶ್ಯಾಮಲಾದೇವಿ, ಕೊಡಗಿನ ಗೌರಮ್ಮ, ಗಿರಿಜಮ್ಮರಂತಹ ಹಲವು ಕಥೆಗಾರ್ತಿಯರು ಹೊರಹೊಮ್ಮಿದರು. ಈ ಅವಧಿಯಲ್ಲಿ ರೂಪಗೊಂಡ ಸಣ್ಣಕಥೆಗಳಲ್ಲಿ ಹೆಣ್ಣು ಆದರ್ಶಮಯಿಯಾಗಿ, ತ್ಯಾಗಮಯಿಯಾಗಿ, ಕ್ಷಮಯಾ ಧರಿತ್ರಿಯಾಗಿ, ಸದ್ಗೃಹಸ್ಥೆಯಾಗಿ ರೂಪುಗೊಂಡಳು. ವಿಧವಾ ಸಮಸ್ಯೆಯಂತಹ ವಿಚಾರಗಳು ಸ್ಥಾನ ಪಡೆದರೂ, ಎಲ್ಲವೂ ಪುರುಷ ಪ್ರಧಾನ ವ್ಯವಸ್ಥೆಗೆ ಪೂರಕವಾಗಿಯೇ ಚಿತ್ರಿತಗೊಂಡವು. ಪ್ರಗತಿಶೀಲ ಸಾಹಿತ್ಯದಲ್ಲಿ ಮಹಿಳೆಯರ ಒಂದಿಷ್ಟು ಸಮಸ್ಯೆಗಳು ಚರ್ಚಿಸಲ್ಪಟ್ಟವು, ವೇಶ್ಯಾ ಸಮಸ್ಯೆ, ಮಹಿಳಾ ಶೋಷಣೆಯ ಹಲವು ಬಗೆಗಳು ಕಥಾವಸ್ತುಗಳಾದವು. ಅನುಪಮಾ ನಿರಂಜನ, ತ್ರಿವೇಣಿ, ಎಂ.ಕೆ.ಇಂದಿರಾರಂತಹ ಕಥೆಗಾರ್ತಿಯರು ಪ್ರಗತಿಶೀಲ, ನವ್ಯ ಎರಡೂ ಪ್ರಕಾರಗಳಲ್ಲಿಯೂ ಕಥಾರಚನೆ ಮಾಡಿದ್ದಾರೆ. ಈ ಕಾಲಘಟ್ಟದಲ್ಲಿ ಹೆಣ್ಣಿನ ಮನೋಲೋಕಗಳು ಸಾಹಿತ್ಯದಲ್ಲಿ ಸ್ಥಾನ ಪಡೆದವು. ಆತ್ಮವಿಮರ್ಶೆಯ ಮೂಲಕ ಸಮಾಜ ವಿಮರ್ಶೆಯು ನಡೆಯತೊಡಗಿದವು. ಎಚ್.ವಿ.ಸಾವಿತ್ರಮ್ಮನವರ 'ರಾಮಲಕ್ಷ್ಮಣಸೀತೆ', ಅನುಪಮಾ ನಿರಂಜನರವರ 'ಮಾಧವಿ'ಯಂತಹ ಕಾದಂಬರಿಗಳು, ಪುರಾಣದ ಪಾತ್ರಗಳು ಹೊಸ ದೃಷ್ಟಿಕೋನದಲ್ಲಿ ರೂಪ ಪಡೆದಿರುವುದಕ್ಕೆ ಉತ್ತಮ ಉದಾಹರಣೆಗಳಾದವು."

ಆಧುನಿಕ ಮನೋಭಾವ ಹೊಂದಿರುವ ಮಹಿಳೆಯರ ಸಮಸ್ಯೆಗಳು, ಮಹಿಳಾ ಸ್ವಾತಂತ್ರ್ಯದ ಮಹತ್ವ, ಸ್ವೇಚ್ಛೆಗೂ ಸ್ವಾತಂತ್ರ್ಯಕ್ಕೂ ಇರುವ ಅಂತರದ ಬಗ್ಗೆ ವಿವರಿಸಿದವು. ಆಧುನಿಕತೆಯ ಜೊತೆಗೆ ಸಹನೆಯ ಮನೋಭಾವ ಅನುಸರಿಸಿಕೊಂಡು ಹೋಗುವ ಸ್ವಭಾವಗಳ ಮಹತ್ವ ಕಥೆಗಳಲ್ಲಿ ವಿವರಿಸಲ್ಪಟ್ಟವು. ಇತ್ತೀಚಿನ ದಿನಗಳಲ್ಲಿ ಮಹಿಳಾ ಸಾಹಿತ್ಯದ ಪರಂಪರೆಯನ್ನು ಮುರಿದು ಕಟ್ಟುವ ಪ್ರಯತ್ನಕ್ಕೆ ಮುಂದಾದ ಲೇಖಕಿಯರಲ್ಲಿ ಗೀತಾ ನಾಗಭೂಷಣ, ವೀಣಾ ಶಾಂತೇಶ್ವರ, ಬಿ.ಟಿ.ಲಲಿತಾನಾಯಕ್, ವೈದೇಹಿ, ಸಾರಾ ಅಬೂಬಕರ್, ಸುಧಾಮೂರ್ತಿ, ನೇಮಿಚಂದ್ರ, ನಾಗವೇಣಿ ಮುಂತಾದವರು ಅಗ್ರಗಣ್ಯರು. ಕಥೆ–ಕಾದಂಬರಿಗಳಲ್ಲಿ ಇತ್ತೀಚಿನ ಕಥಾನಾಯಕಿಯರು ಪುರುಷ ಪ್ರಧಾನ ವ್ಯವಸ್ಥೆಯೆದುರು ಸೋಲನ್ನು ಒಪ್ಪಿಕೊಳ್ಳದೆ ಶೋಷಣೆಯನ್ನು ವಿರೋಧಿಸಿ ಹೊರಬರುವ ಹೊಸ ಪ್ರಯತ್ನಗಳನ್ನು ಮಾಡಿದರು.

ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆಯು ಮಹಿಳೆಯರ ಧ್ವನಿ, ಅಸ್ತಿತ್ವದ ಹುಡುಕಾಟ, ಶೋಷಣೆಯ ವಿರುದ್ಧ ಪ್ರತಿರೋಧ ಮತ್ತು ಆತ್ಮ ಶೋಧನೆಯನ್ನು ಕೇಂದ್ರೀಕರಿಸುತ್ತದೆ. ಅಲ್ಲಿ ಮಹಿಳೆಯರು ತಮ್ಮ ನೋವು, ಸಂಕಟ ಮತ್ತು ಸಾಮಾಜಿಕ ಅನ್ಯಾಯಗಳನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸುತ್ತಾರೆ. ಇದು ಕೇವಲ ಪುರುಷ ವಿರೋಧಿ ಧೋರಣೆಯಲ್ಲದೆ ತನ್ನ ದೃಷ್ಟಿಕೋನದಿಂದ ಬದುಕನ್ನು ನೋಡುವ ಮತ್ತು ತನ್ನ ಅಸ್ತಿತ್ವವನ್ನು ದೃಢೀಕರಿಸುವ ಒಂದು ಪ್ರಮುಖ ಹೆಜ್ಜೆಯಾಗಿದೆ. ಮಹಿಳೆಯರ ಸ್ವಾತಂತ್ರ್ಯ, ಸಮಾನತೆ ಮತ್ತು ಸ್ವಯಂ ಸಾಕ್ಷಾತ್ಕಾರದ ಬಗೆಗಿನ ಹೋರಾಟದ ಒಂದು ಪ್ರತಿಫಲನವಾಗಿದೆ.

ಇಂದಿನ ಮಹಿಳಾ ಸಾಹಿತ್ಯದಲ್ಲಿ ಅಸಮಾನತೆಯ ದಾಂಪತ್ಯದ ಕುರಿತು ನಿರಾಕರಣೆ ಇದೆ. ಶೀಲವೆಂದರೆ ಹೆಣ್ಣು ಎಂಬ ಕಲ್ಪನೆಯನ್ನು ಅದು ನಿರಾಕರಿಸುತ್ತದೆ. ಒತ್ತಾಯದ ಹೇರುವಿಕೆಯ ಕ್ರಮಗಳನ್ನು ವಿರೋಧಿಸುತ್ತದೆ. ಅಂತಹ ನೂರಾರು ಕವಿತೆಗಳು, ಕಥೆಗಳು ಇಂದಿನ ಸಾಹಿತ್ಯವನ್ನು ಹೊಸ ದೃಷ್ಟಿಕೋನದಲ್ಲಿ ವಿರಚಿಸುತ್ತವೆ. ಅಕ್ಷರಕ್ರಾಂತಿಯೊಂದಿಗೆ ಇಂದಿನ ಸ್ತ್ರೀ ಸಮುದಾಯ ಬೆಳೆದು ಸಂಪೂರ್ಣ ವಿಶಿಷ್ಟ ಮಹಿಳಾ ಶೈಲಿ, ವಸ್ತು, ವೈವಿಧ್ಯತೆಯೆಡೆಗೆ ತನ್ನನ್ನು ಗುರುತಿಸಿಕೊಳ್ಳುವ ಪ್ರಯತ್ನದೊಂದಿಗೆ ಸ್ತ್ರೀ ಸಾಹಿತ್ಯವೂ ಪುರುಷ ಬಹುತ್ವ ಸಾಹಿತ್ಯದೊಂದಿಗೆ ಸಂವಾದಿಯಾಗಿ ನಿಲ್ಲುವ ನೆಲೆಯನ್ನು ಹುಡುಕುತ್ತಿದೆ. ಸ್ತ್ರೀಯಾತ್ಮಕ ಚಿಂತನೆಗಳು, ಸ್ತ್ರೀ ಸ್ವತಂತ್ರ ಅಭಿವ್ಯಕ್ತಿಯ ಸಂಗತಿಗಳು ಇಂದಿನ ಆಧುನಿಕ ಪ್ರಜ್ಞೆಯ ಕಥೆ ಕಾವ್ಯಗಳಲ್ಲಿ ಹೇರಳವಾಗಿರಬಹುದು. ಆದರೆ ಇದೆಲ್ಲದರ ಮೂಲ ಹುಡುಕಿದರೆ ನಮ್ಮ ಜಾನಪದ ಜಗತ್ತಿನ ಸಾಹಿತ್ಯ ಪ್ರಪಂಚ ಎಷ್ಟು ಪ್ರಜ್ಞಾಪೂರ್ವಕ ಜಗತ್ತಾಗಿತ್ತು ಎಂಬುದನ್ನೂ ನಾವು ಗಮನಿಸಲೇಬೇಕಾಗುತ್ತದೆ.

ಆನಂತರದ ಶಿಷ್ಟ ಸಾಹಿತ್ಯ ಪರಂಪರೆಯಲ್ಲಿ ನಮ್ಮ ಹಿಂದಿನ ಕವಿಗಳ ವಿರಚಿತ ಕಾವ್ಯಗಳಲ್ಲಿ ಸ್ತ್ರೀಯನ್ನು ಪೂರಕ ಪಾತ್ರವಾಗಿ ದೇವಿ, ತಾಯಿ ಇಲ್ಲವೇ ರಕ್ಕಸಿಯ ರೂಪದಲ್ಲಿ ಹೆಚ್ಚು ಕಡಿಮೆ ಕರೆಯಲಾಗಿದೆ. ಅಂಬೆ ಪಾತ್ರದ ಹೊರತಾಗಿ ಪುರುಷನಿಗೆ ಸೆಡ್ಡು ಹೊಡೆಯುವ ಸ್ತ್ರೀ ಪಾತ್ರಗಳು ನೆನಪಾಗಲಾರವು. ಆದರೆ ಇಂದಿನ ಶಿಷ್ಟ ಸಾಹಿತ್ಯದಲ್ಲಿ ಸ್ತ್ರೀ ಪಾತ್ರಗಳನ್ನು ಇಂದಿನ ಸಾಹಿತ್ಯ ಜಗತ್ತಿನ ಹಲವು ಮಹಿಳಾ ಸಾಹಿತಿಗಳು ಪುನರ್‌ರಚನೆಯ ನೆಲೆಯಲ್ಲಿ ಸ್ತ್ರೀಯಾತ್ಮಕ ನೆಲೆಯಲ್ಲಿ ವಿಭಿನ್ನವಾಗಿ ಚಿತ್ರಿಸಿದ್ದಾರೆ. 12ನೇ ಶತಮಾನಕ್ಕೆ ಬಂದರೆ ವಚನ ಸಾಹಿತ್ಯದ ಪ್ರಮುಖ ವಚನಗಾರ್ತಿಯರು ಸಾಮಾಜಿಕ ನೆಲೆಯಲ್ಲಿ ಸಾಂಸ್ಕೃತೀಕರಣದ ಹಿನ್ನೆಲೆಯಲ್ಲಿ ಪೋಷಿಸಲ್ಪಟ್ಟ ಸಾಂಪ್ರದಾಯಿಕ ವಿಧಿವಿಧಾನಗಳನ್ನು, ಕಂದಾಚಾರಗಳನ್ನು ವಿರೋಧಿಸಿ ವಚನಗಳನ್ನು ಬರೆದರು. ಅಕ್ಕಮಹಾದೇವಿ, ಮುಕ್ತಾಯಕ್ಕನಂತಹ ಹಲವು ವಚನಗಾರ್ತಿಯರು ಅಂದಿನ ಕಾಲಕ್ಕೆ ಸಮಾನತೆ ಅಗತ್ಯವನ್ನು ಹೇರಳವಾಗಿ ತಮ್ಮ ವಚನಗಳಲ್ಲಿ ಮಂಡಿಸಿದ್ದಾರೆ.

ಆಧುನಿಕ ಮಹಿಳಾ ಸಾಹಿತ್ಯವನ್ನು ಸಂಪೂರ್ಣ ಮಹಿಳಾ ವಿರಚಿತ ಸಾಹಿತ್ಯದ ಹಿನ್ನೆಲೆಯನ್ನು ವಿಶಿಷ್ಟವಾಗಿ ಮೂರು ನೆಲೆಗಳಲ್ಲಿ ಗುರುತಿಸಬಹುದು. ಮೊದಲಿನ ಸ್ವಾತಂತ್ರ್ಯಪೂರ್ವದ ಮಹಿಳಾ ಸಂವೇದನೆಗಳಲ್ಲಿ ತಮ್ಮ ವ್ಯಕ್ತಿತ್ವ ಮತ್ತು ಸ್ತ್ರೀ ಅನುಭವಿಸುವ ಸಂಕಟಗಳ ಬಗ್ಗೆ ವಿಷಾದವಿದ್ದರೂ ಪಿತೃಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸದೆ ಕೌಟುಂಬಿಕ ನೆಲೆಯಲ್ಲಿ ಅದನ್ನು ಪೋಷಿಸುವ ಜವಾಬ್ದಾರಿಯನ್ನು ಹೆಣ್ಣೇ ಹೊರಬೇಕೆನ್ನುವ ಅಧೀನ ಭಾವ ಗೋಚರಿಸುತ್ತದೆ. ಅಲ್ಲದೇ “ಕೊಡಗಿನ ಗೌರಮ್ಮ, ತಿರುಮಲಾಂಬ, ಸರಸ್ವತಿಬಾಯಿ ರಾಜವಾಡೆ, ತಿರುಮಲೆ ರಾಜಮ್ಮ ಮುಂತಾದವರ ಕೃತಿಗಳಲ್ಲಿ ದಾರ್ಶನಿಕತೆಯ ಕಡೆಗೆ ಹೆಚ್ಚಿನ ಒಲವಿತ್ತು. ಕನ್ನಡದ ಮೊದಲ ಕಾದಂಬರಿ ಎಂದು ಪ್ರಸಿದ್ಧವಾದ ತಿರುಮಲಾಂಬಾರವರು ಬರೆದ ‘ಸುಶೀಲೆ’ಯಾಗಿರಲಿ, ಮಧ್ಯಮವರ್ಗದ ಹೆಣ್ಣುಗಳ ತುಡಿತಗಳು, ಸಾಂಪ್ರದಾಯಿಕ ಚೌಕಟ್ಟಿನಲ್ಲಿನ ತಲ್ಲಣಗಳನ್ನು ಚಿತ್ರಿಸಿ ಬರೆದ ‘ಎಂ.ಕೆ.ಇಂದಿರ’ರವರ–ಎರಡು ಕನಸು, ಗೆಜ್ಜೆ ಪೂಜೆ, ಬಿಡುಗಡೆ, ಶುಭಮಂಗಳ ಮುಂತಾದ ಕೃತಿಗಳಾಗಿರಲಿ, ಮಹಿಳೆಯರ ವಿವಿಧ ಮುಖಗಳ ಸಮಸ್ಯೆಗಳನ್ನು ಸಾಮಾಜಿಕ, ಮನೋವೈಜ್ಞಾನಿಕ ನೆಲೆಯ ಕಥಾ ಹಂದರದೊಳಗೆ ಕಟ್ಟಿಕೊಟ್ಟ ‘ತ್ರಿವೇಣಿಯವರ’–ಸೋತು ಗೆದ್ದವಳು, ಶರಪಂಜರ, ಬೆಳ್ಳಿಮೋಡ ಮುಂತಾದ ಕಾದಂಬರಿಗಳಲ್ಲಾಗಿರಲಿ, ‘ಅನುಪಮಾ ನಿರಂಜನ’ರವರ ‘ಮಾಧವಿ’ ಕಾದಂಬರಿಯಾಗಿರಲಿ ಮಹಿಳಾ ಪಾತ್ರಗಳ ಪ್ರಾತಿನಿಧ್ಯವಿದ್ದರೂ ಅವು ಸಾಮಾಜಿಕ ನಡವಳಿಕೆಗೆ ಅತೀತವಾಗಿ

ನಡೆದುಕೊಳ್ಳಲಾರದ ಪಾತ್ರಗಳು, ತಮ್ಮ ದುಃಸ್ಥಿತಿಗೆ ಈ ಹೆಣ್ತನವೇ ಕಾರಣವೆಂಬ ಮನೋಭೂಮಿಕೆಯಲ್ಲಿ ನರಳುವಂಥ ಪಾತ್ರಗಳು, ಅಂದಿನ ಲೇಖಕಿಯರ ಕೃತಿಗಳಲ್ಲಿ ಸಾಮಾಜಿಕ ಕಳಕಳಿ ಇದ್ದರೂ ಭಾರತೀಯ ಕೌಟುಂಬಿಕ ವ್ಯವಸ್ಥೆಯಲ್ಲಿ ಹೆಣ್ಣು ಅನುಭವಿಸುತ್ತಿದ್ದ ಸಂಕಟಗಳ ವಿಜೃಂಭಣೆಯನ್ನಷ್ಟೇ ಕಟ್ಟಿಕೊಟ್ಟರು". ಅದರಿಂದ ಹೊರಬರುವ ಮಾರ್ಗಗಳ ಕುರಿತು ಮೌನವಾದರು.

ಇನ್ನು ಎರಡನೆಯ ತಲೆಮಾರಿಗೆ ಪುರುಷ ಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸಿ ಸ್ವತಂತ್ರ ಆಕಾಂಕ್ಷೆ ಹೊಂದಿದ್ದರೂ ಅದನ್ನು ದಕ್ಕಿಸಿಕೊಳ್ಳುವಲ್ಲಿ ಅಸಮರ್ಥತೆ ಇರುವುದರಿಂದ ಆ ವ್ಯವಸ್ಥೆಯನ್ನು ಮೀರಿ ಬದುಕುವ ಪರಿಸರ ನಿರ್ಮಿತಿಯನ್ನು ಸೃಷ್ಟಿಸಲಾಗದ ಅಸಹಾಯಕತೆಯನ್ನು ಅಭಿವ್ಯಕ್ತಿಸಿದಂತವು. ಉದಾಹರಣೆಗೆ–'ವೀಣಾ ಶಾಂತೇಶ್ವರರ' 'ಗಂಡಸರು' ಕಾದಂಬರಿಯ 'ಶಾಂತಿ', 'ನಿರಾಕರಣೆ' ಕಥೆಯ 'ಶಕುಂತಲೆ', 'ಗೀತಾ ನಾಗಭೂಷಣರ' ಅವ್ವ, ಹಸಿಮಾಂಸ ಮತ್ತು ಹದ್ದುಗಳು, 'ಬಿ.ಟಿ.ಲಲಿತಾನಾಯಕರ' 'ಗತಿ' ಕಾದಂಬರಿ, 'ವೈದೇಹಿ'ಯವರ 'ಅಮ್ಮಚ್ಚಿಯೆಂಬ ನೆನಪು', ಕಥೆ 'ಅಕ್ಕು' ಕಾದಂಬರಿ, 'ಸಾರಾ ಅಬೂಬಕರ್'ರವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ 'ನಾದಿಯಾ' ಹೀಗೆ ಇವರೆಲ್ಲರ ಪ್ರಮುಖ ಪಾತ್ರಗಳು ಪ್ರತಿಭಟನೆಯ ಪಾತ್ರಗಳಾಗಿದ್ದರೂ ಅಸ್ತಿತ್ವದ ಹೊಸ ರೂಪದ ಆಕಾಂಕ್ಷೆ ಹೊಂದಿದ್ದರೂ ಸನ್ನಿವೇಶದ ಕೈಗೊಂಬೆಯಂತೆ ಚಿತ್ರಿಸಲ್ಪಟ್ಟಿವೆ. ತಾಯಿಯಾಗಿ, ಗೆಳತಿಯಾಗಿ, ಪತ್ನಿಯಾಗಿ ತನ್ನ ತ್ಯಾಗವನ್ನು ನೀಡಿಯೂ ಜಗತ್ತಿನ ನ್ಯಾಯ ತಕ್ಕಡಿಯಲ್ಲಿ ಆಕೆಗೆ ಸಿಗದ ಜಯದ ಕುರಿತು ವಿಷಾದವಿದೆ.

ಇದರ ಮುಂದುವರೆದ ದನಿಯಾಗಿ ಮೂರನೇ ತಲೆಮಾರಿನ ಮಹಿಳಾ ಸಾಹಿತ್ಯ ಭಿನ್ನ ಸಾಂಸ್ಕೃತಿಕ, ಸಾಮಾಜಿಕ ಅನುಭವಗಳಿಂದ ಗೋಚರಿಸುತ್ತವೆ. ಸ್ತ್ರೀ ಸ್ವತಂತ್ರ ವ್ಯಕ್ತಿತ್ವ ಮತ್ತು ಸ್ವಾಯತ್ತ ನೆಲೆಯಲ್ಲಿ ಪ್ರಕಟಗೊಳ್ಳುತ್ತವೆ. ಪ್ರತಿಭಾ ನಂದಕುಮಾರ, ಲಲಿತಾ ಸಿದ್ಧಬಸವಯ್ಯ, ಸವಿತಾ ನಾಗಭೂಷಣ, ಎಚ್.ಎಲ್.ಪುಷ್ಪ, ದು.ಸರಸ್ವತಿ, ಎಂ.ಎಸ್.ವೇದಾ, ಎಚ್.ಎಸ್.ಮುಕ್ತಾಯಕ್ಕ, ಹೇಮಾ ಪಟ್ಟಣಶೆಟ್ಟಿ, ಎಲ್.ಸಿ.ಸುಮಿತ್ರಾ, ಎಸ್.ವಿ.ಪ್ರಭಾವತಿ, ಕೆ.ಷರೀಫಾ, ಎಂ.ಆರ್.ಕಮಲ, ಮಮತಾ ಸಾಗರ, ಭಾರತಿ ಬಿ.ವಿ., ಅನಂತರದ ತಲೆಮಾರಿನ ವಿಭಾ, ವಿನಯಾ ಒಕ್ಕುಂದ, ತಾರಿಣಿ ಶುಭದಾಯಿನಿ, ಸುನಂದಾ ಕಡಮೆ, ಮಾಧವಿ, ನಾಗರೇಖಾ ಗಾಂವಕರ, ತೇಜಶ್ರೀ.ಜ.ನಾ, ರೇಣುಕಾ ರಮಾನಂದ, ಶ್ರೀದೇವಿ ಕೆರೆಮನೆ, ಪೂರ್ಣಿಮಾ ಮಾಳಗಿಮನೆ, ಮಂಜುಳಾ ಹಿರೇಮಠ, ಕಾವ್ಯಾ ಕಡಮೆ ಮುಂತಾದ ಮಹಿಳಾ ಸಾಹಿತಿಗಳ ಬಹುಮುಖ್ಯ ಪ್ರಜ್ಞೆ ಪರ್ಯಾಯದ ಹುಡುಕಾಟವಾಗಿದೆ. ಸಮಕಾಲೀನ ಸಂದರ್ಭಗಳ ಎಲ್ಲ ಸಂಗತಿಗಳಿಗೆ ದನಿಯಾಗುತ್ತ ಸ್ತ್ರೀ ಸ್ವತಂತ್ರ ದೃಷ್ಟಿಕೋನವನ್ನು ಬೆಳೆಸಿಕೊಳ್ಳುತ್ತ ಸಾಗುತ್ತಿದೆ. ಸಾಹಿತ್ಯ ಈ ತಲೆಮಾರಿಗೆ ತನ್ನಲ್ಲಿನ ಒಳಗನ್ನು ಸ್ವಯಂ ಸ್ಫೂರ್ತಿಯಿಂದ ವ್ಯಕ್ತಗೊಳಿಸಲು ಇರುವ ಮಾಧ್ಯಮವಾಗಿದೆ.

ಇಂದಿನ ಮಹಿಳಾ ಸಾಹಿತ್ಯದಲ್ಲಿ ಅಸಮಾನತೆಯ ದಾಂಪತ್ಯದ ಕುರಿತು ನಿರಾಕರಣೆ ಇದೆ. ಶೀಲವೆಂದರೆ ಹೆಣ್ಣು ಎಂಬ ಕಲ್ಪನೆಯನ್ನು ನಿರಾಕರಿಸುತ್ತದೆ. ಒತ್ತಾಯದ ಹೇರುವಿಕೆಯ ಕ್ರಮಗಳನ್ನು ವಿರೋಧಿಸುತ್ತವೆ. ಅಂತಹ ನೂರಾರು ಕವಿತೆಗಳು, ಕಥೆಗಳು ಇಂದಿನ ಸಾಹಿತ್ಯವನ್ನು ಹೊಸ ದೃಷ್ಟಿಕೋನದಲ್ಲಿ ವಿರಚಿಸುತ್ತದೆ. ಇಷ್ಟಾಗಿಯೂ ಸ್ತ್ರೀಯರ ಬೌದ್ಧಿಕತೆಯನ್ನು, ಅಸ್ತಿತ್ವವಾದವನ್ನು ತಿರಸ್ಕರಿಸುವ ಅದನ್ನು ಹಳದಿ ಇಲ್ಲ ಕೆಂಪು ಕಣ್ಣುಗಳಿಂದ ನೋಡುವ ಜನರೇ ಹೆಚ್ಚಿರುವುದರಿಂದ ಮಹಿಳಾ ಸಂವೇದನೆಗೆ ಸಮಾನತೆಯ ಚಿಂತನೆಗಳಿಗೆ ಕಾಲವೇ ಉತ್ತರಿಸಬೇಕಷ್ಟೇ.

'ಹೆಚ್.ಜಿ.ರಾಧಾದೇವಿಯವರ' ಕಾದಂಬರಿಯಾದ 'ಅದೃಷ್ಟದ ಅಂಚಿನಲ್ಲಿ' ಎಂಬ ಕಾದಂಬರಿಯಲ್ಲಿ "ಹೆಂಡತಿ ಹೊಟ್ಟೆಗೆ ತುಂಬಾ ಅನ್ನ ಹಾಕಿ ಮೈತುಂಬ ಬಟ್ಟೆ ತೆಗೆದು ಕೊಡಲಿಕ್ಕೆ ಆಗದೆ ಇದ್ದರೂ ಹೊಡೆದು ಬಡಿದು ಮಾಡೊದ್ರಲ್ಲಿ ಪ್ರವೀಣರು, ನಿಮ್ಮ ಯೋಗ್ಯತೆಗೆ ಬೆಂಕಿ ಹಾಕಿದರು. ಇಡೀ ಈ ತಿಂಗಳು ಹತ್ತು ಸೇರು ಅಕ್ಕಿ ಬಿಟ್ಟರೆ ಸಂಸಾರಕ್ಕೆ ಏನು ತಂದಿದ್ದೀರೀ? ಇನ್ನು ಹೀಗೆ ಬಾಯಿ ಮುಚ್ಚಿಕೊಂಡು ಸಹಿಸಿಕೊಂಡು ಇರಲಿಕ್ಕೆ ಸಾಧ್ಯವಿಲ್ಲ. ಯಾವುದಾದರೂ ಒಂದು ಇತ್ಯರ್ಥವಾಗಬೇಕು." ಶಾರದಾಳ ಈ ಮಾತಿನಲ್ಲಿ ತನ್ನ ಗಂಡನಿಂದ ತನಗಾದ ಅನ್ಯಾಯವನ್ನು ದಿಟ್ಟತನದಿಂದ ಪ್ರಶ್ನಿಸುವುದನ್ನು ಗಮನಿಸಬಹುದು. ಹೆಂಡತಿ ಮಕ್ಕಳನ್ನು ಬಡತನದ ಬೇಗೆಯಲ್ಲಿ ಬೇಯುವಂತೆ ಮಾಡಿ ತನ್ನ ಸ್ವಾರ್ಥವೊಂದನ್ನೇ ನೋಡಿಕೊಳ್ಳುವ ಗಂಡನ ವಿರುದ್ಧ ಶಾರದಾ ಆಕ್ರೋಶ ವ್ಯಕ್ತಪಡಿಸುತ್ತಾಳೆ. ತನ್ನ ಗಂಡ ಯಾವುದಕ್ಕೂ ಹಿಂಜರಿಯುವುದಿಲ್ಲ ಎಂದು ಅರಿತು ಮಗನ ಉತ್ತಮ ಭವಿಷ್ಯಕ್ಕಾಗಿ ಗಂಡನನ್ನು ತೊರೆದು ಹೊರಡುವ ಶಾರದಾಳ ಮಾತು ಇದುವರೆಗೆ ಮೌನವಾಗಿ ಅನುಭವಿಸಿದ ಸಂಕಟದ ಪರಮಾವಧಿಯನ್ನು ಸೂಚಿಸುತ್ತದೆ. ಇಲ್ಲಿ ಶಾರದಾಳ ಸಹನೆಯ ಕಟ್ಟೆ ಒಡೆದ ಕ್ಷಣವನ್ನು ಕಾಣಬಹುದು. ದೀರ್ಘ ಕಾಲದ ತಾಳ್ಮೆ ಕೊನೆಗೊಂಡು ಇನ್ನು ಮುಂದೆ ಈ ಪರಿಸ್ಥಿತಿಯನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಪ್ರತಿರೋಧದ ಭಾವನೆ ಇಲ್ಲಿ ಸ್ಪಷ್ಟವಾಗಿದೆ. ಆಕೆ ತನ್ನ ಮೇಲೆ ನಡೆಯುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತಿದ್ದಾಳೆ.

ಇಲ್ಲಿ ಬರುವ ನಾಯಕಿ ಶಾರದಾ ಅಷ್ಟೇ ಅಲ್ಲದೇ ಅನೇಕ ಮಹಿಳೆಯರ ಆರ್ಥಿಕ ನಿರ್ಲಕ್ಷ, ದೈಹಿಕ ಹಿಂಸೆ ಮತ್ತು ದೀರ್ಘಕಾಲದ ಮೌನದಿಂದ ಅನುಭವಿಸಿದ ನೋವು, ಹತಾಶೆ, ಅವಮಾನಗಳ ಆಳವಾದ ಸಂವೇದನೆಗಳನ್ನು ಅನಾವರಣಗೊಳಿಸುತ್ತದೆ. ಹಾಗೆಯೇ ತನ್ನ ತಾಳ್ಮೆಯ ಮಿತಿಯನ್ನು ತಲುಪಿ ತನ್ನ ಸ್ವಾಭಿಮಾನ ಮತ್ತು ನ್ಯಾಯಕ್ಕಾಗಿ ದೃಢವಾಗಿ ನಿಲ್ಲುವ ಸಂಕಲ್ಪವನ್ನು ಬಿಂಬಿಸುತ್ತದೆ.

'ಗೆಲುವಿನ ಹಾದಿ' ಎಂಬ ಕಾದಂಬರಿಯಲ್ಲಿ ಬರುವ ನಾಯಕಿ ಮಾಲತಿ ತಂದೆ ತಾಯಿಯರಿಗೆ ಮುದ್ದಿನ ಮಗಳೇನು ಅಲ್ಲ, ಚೊಚ್ಚಲ ಬಸುರಲ್ಲೇ ಗಂಡು ಬಯಸಿದ ಇಂದಿರಮ್ಮ ರಾಜರಾಣಿಯರಿಗೆ ಹುಟ್ಟಿದ್ದು ಹೆಣ್ಣು, ನಂತರದಲ್ಲಿ ಹುಟ್ಟಿದ್ದೂ ಹೆಣ್ಣು, ಈ ಜೋಡಿ ಹೆಣ್ಣು ನೋಡಿ "ಇನ್ನು ಮಕ್ಕಳೇ ಸಾಕು, ನಮಗೆ ಹುಟ್ಟೋದೆಲ್ಲ ಹೆಣ್ಣೇ, ಬರೀ ಖರ್ಚು ಮಾಡಿಸೋ ಈ ಹೆಣ್ಣುಗಳು ಹುಟ್ಟದಿದ್ದರೆ ಯಾವ ದೇವರು ಅತ್ತ." ಎಂಬ ಇಂದಿರಮ್ಮನ ಮಾತುಗಳು ಹೆಣ್ಣು ಮಕ್ಕಳನ್ನು ಆರ್ಥಿಕ ಹೊರೆ ಎಂದು ಪರಿಗಣಿಸುವ ಮನಸ್ಥಿತಿಯನ್ನು ತೋರಿಸುತ್ತದೆ. "ಸದ್ಯ ನೀನು ಇಷ್ಟು ಮುಗ್ಧಳಾಗಿ ಇರೋ ಹೊತ್ತಿಗೆ ಸರಿ ಹೋಯ್ತು. ಇಲ್ಲಾ ಎಂಥ ನಿರಾಶೆ ಆಗಿರೋದೋ? ನಿಮ್ಮ ತಂದೆ ತಾಯಿ ಸ್ವಾರ್ಥಿಗಳು ಅನ್ನಿಸುತ್ತೆ ನನಗೆ. ನಿನ್ನ ಸಂಪಾದನೆ ಮೇಲೆ ಅವರಿಗೆ ಕಣ್ಣಿದೆ." ಎಂದು ಹೇಳಿದಾಗ ಮಾಲತಿ ಅದನ್ನು ಸಂಪೂರ್ಣವಾಗಿ ಒಪ್ಪುವುದಿಲ್ಲ. ತನ್ನ ಸಂಪಾದನೆಯ ಒಂದು ಭಾಗ ಚಿನ್ನವಾಗಿ ತನ್ನ ಮೈ ಮೇಲೆ ಇದೆ. ಇನ್ನೊಂದು ಭಾಗ ತನ್ನ ಊಟ ತಿಂಡಿಗೆ ಹೋಗುತ್ತದೆ ಎಂದು ಹೇಳುವುದು ಮಾಲತಿ ತನ್ನ ಸಂಪಾದನೆಯನ್ನು ತನ್ನ ವೈಯಕ್ತಿಕ ಉಪಯೋಗಕ್ಕೆ ಬಳಸಿಕೊಳ್ಳುವಲ್ಲಿ ಸ್ವಾತಂತ್ರ್ಯ ಹೊಂದಿದ್ದಾಳೆ ಎಂಬುದನ್ನು ತಿಳಿಸುತ್ತದೆ.

ಇದು ಮಹಿಳೆಯರು ಕೇವಲ ಕುಟುಂಬದ ಆದಾಯಕ್ಕೆ ಕೊಡುಗೆ ನೀಡುವ ಸಾಧನವಾಗಿರದೇ ತಮ್ಮ ವೈಯಕ್ತಿಕ ಅಗತ್ಯತೆಗಳು ಮತ್ತು ಆಸೆಗಳಿಗಾಗಿಯೂ ಸಂಪಾದನೆಯನ್ನು ಬಳಸಿಕೊಳ್ಳುವ ಹಕ್ಕನ್ನು ಹೊಂದಿರುತ್ತಾರೆ ಎಂಬ ಸ್ತ್ರೀ ಸಂವೇದನೆ ಎತ್ತಿ ತೋರಿಸುತ್ತದೆ. ಅದರೊಂದಿಗೆ ಮಾಲತಿಯ ಮುಗ್ಧತೆ ಮತ್ತು ಕೆಲವೊಮ್ಮೆ ಜಗತ್ತಿನ ಕಠಿಣ

ವಾಸ್ತವದ ಬಗ್ಗೆ ಇರುವ ಅರಿವಿನ ಕೊರತೆಯನ್ನು ಸೂಚಿಸುತ್ತದೆ. ಪ್ರೀತಿ, ಸಂಬಂಧಗಳು ಮತ್ತು ಆರ್ಥಿಕ ವಿಚಾರಗಳಲ್ಲಿ ಕೆಲವೊಮ್ಮೆ ಮಹಿಳೆಯರು ನಿರೀಕ್ಷೆಗಳನ್ನು ಇಟ್ಟುಕೊಂಡು ನಿರಾಸೆಗೊಳ್ಳುವ ಸಾಧ್ಯತೆ ಇದೆ. ಮಾಲತಿಯ ಈ ಮುಗ್ಧತೆಯು ಅವಳ ಸರಳ ಸ್ವಭಾವವನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ಮಹಿಳೆಯರ ಭಾವನಾತ್ಮಕ ಲೋಕ, ಅವರ ಮದುವೆಯ ಬಗೆಗಿನ ದೃಷ್ಟಿಕೋನ, ಆರ್ಥಿಕ ದೃಷ್ಟಿಕೋನ, ಆರ್ಥಿಕ ಸ್ವಾತಂತ್ರ್ಯದ ಮಹತ್ವ ಮತ್ತು ಆಪ್ತ ಗೆಳತಿಯೊಂದಿಗಿನ ಬಾಂಧವ್ಯದ ಮೂಲಕ ಸ್ತ್ರೀ ಸಂವೇದನೆಯನ್ನು ಅನಾವರಣಗೊಳಿಸುತ್ತದೆ. ಮಹಿಳೆಯರು ಕೇವಲ ಸಾಂಪ್ರದಾಯಿಕ ಪಾತ್ರಗಳನ್ನು ನಿರ್ವಹಿಸುವವರಾಗಿರದೆ, ತಮ್ಮದೇ ಆದ ವೈಯಕ್ತಿಕ ಆಲೋಚನೆಗಳು, ಆಸೆಗಳು ಮತ್ತು ಸ್ವಾಭಿಮಾನವನ್ನು ಹೊಂದಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಸಾಹಿತ್ಯ ಪ್ರಕಾರಗಳ ಪ್ರಧಾನ ಧಾರೆಗಳಲ್ಲಿ ಮಹಿಳಾ ಸಾಹಿತ್ಯ ಕೂಡಾ ಒಂದು ಝರಿಯಾಗಿ ಹರಿದು ಬಂದಿದೆ. ಪುರುಷ ಪ್ರಧಾನ ವ್ಯವಸ್ಥೆಗೆ ಒಪ್ಪಿತವಾದ ಮೌಲ್ಯಗಳಲ್ಲಿಯೇ ರೂಪುಗೊಳ್ಳುತ್ತಿದ್ದ ಸ್ತ್ರೀ ಸಂವೇದನೆ ಕಾಲದ ಹರವಿನಲ್ಲಿ ಪುರುಷ ಪ್ರಧಾನತೆಯನ್ನು ಪ್ರಶ್ನಿಸುವ, ವಿಮರ್ಶಿಸುವ ಹಂತಕ್ಕೆ ಬೆಳೆದು ಪುರುಷ–ಸ್ತ್ರೀ ಸಮಾನತೆಯನ್ನು ನೆಲೆಗೊಳಿಸುವ ಮಾರ್ಗದಲ್ಲಿ ಸಾಗುತ್ತಿದೆ. ಆದರೂ ಈ 21ನೇ ಶತಮಾನದಲ್ಲಿಯೂ ಕೂಡ ಪುರುಷ ಪ್ರಧಾನ ಮೌಲ್ಯಗಳನ್ನೇ ವಿಜೃಂಭಿಸುವ ಹೆಣ್ಣಿನ ತ್ಯಾಗ, ಸಹನಶೀಲತೆಯಂತಹ ಆರೋಪಿತ ಹೆಣ್ತನದ ಗುಣಗಳನ್ನು ಸಂಭ್ರಮದಿಂದ ಚಿತ್ರಿಸುವ ಕಥಾರಚನೆಗಳನ್ನು ಕಾಣಬಹುದಾಗಿದೆ. ಇದು ಪುರುಷ ಪ್ರಧಾನತೆ ಸಮಾಜದಲ್ಲಿ ಎಷ್ಟು ಆಳವಾಗಿ ನೆಲೆಗೊಂಡಿದೆ ಎಂಬುದನ್ನು ಬಿಂಬಿಸುತ್ತದೆ. 21ನೇ ಶತಮಾನದ ಪ್ರಸ್ತುತ ಸಂದರ್ಭದಲ್ಲಿ ಹೆಣ್ಣು ಶಿಕ್ಷಣ, ಉದ್ಯೋಗದ ವಲಯಗಳಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದ್ದಾಳೆ. ಇದರಿಂದ ಅವಳೇನು ಪೂರ್ಣ ಬಿಡುಗಡೆಯನ್ನು ಪಡೆದಿಲ್ಲ, ಬದಲಾಗಿ ಎರಡೆರಡು ಜವಾಬ್ದಾರಿಗಳಿಗೆ ಹೆಗಲು ಕೊಡಬೇಕಾದ ಅನಿವಾರ್ಯತೆಗೆ ತುತ್ತಾಗಿದ್ದಾಳೆ. ಹೆಣ್ಣಿಗೆ ಹತ್ತು ಕೈಗಳಿವೆ, ಒಂದು ಕೈಯಲ್ಲಿ ಕಂಪ್ಯೂಟರ್, ಒಂದು ಕೈಯಲ್ಲಿ ಸೌಟು, ಒಂದು ಕೈಯಲ್ಲಿ ಮಗು, ಒಂದರಲ್ಲಿ ಗಂಡ ಹೀಗೆ ಹತ್ತು ಕೈಗಳಲ್ಲಿಯೂ ಕೆಲಸ ನಿರ್ವಹಿಸುವ ಹೆಣ್ಣಿನ ಸಾಮರ್ಥ್ಯವನ್ನು ಹೊಗಳುವಂತಹ ಚಿತ್ರಗಳು, ಬರವಣಿಗೆಗಳು ಎಲ್ಲೆಡೆ ಹರಿದಾಡುತ್ತಿವೆ. ಇದು ಹೆಣ್ಣಿಗೆ ಹೆಣೆಯುತ್ತಿರುವ ಇನ್ನೊಂದು ಬಗೆಯ ಸಂಕೋಲೆಯೇ ಹೌದು ಎಂಬುದನ್ನು ಮರೆಯಬಾರದು. ಹೆಣ್ಣು ಎಲ್ಲ ಕಡೆಯೂ ದುಡಿದು ಹೈರಾಣಾಗುತ್ತಿದ್ದಾಳೆ. ಅವಳಿಗೆ ಅಷ್ಟು ಸಾಮರ್ಥ್ಯ ಇದೆಯೋ, ಇಲ್ಲವೋ ನಿನಗೆ ಅಷ್ಟು ಸಾಮರ್ಥ್ಯ ಇದೆ ಎಂಬ ಹುಸಿ ನಂಬಿಕೆಯನ್ನು ಅವಳಲ್ಲಿ ಬಿತ್ತಿ ಆಕೆ ಜರ್ಜರಿತಗೊಳ್ಳುವಂತೆ ಮಾಡಲಾಗುತ್ತಿದೆ. ಉದ್ಯೋಗದ ಸ್ಥಳದಲ್ಲಿರುವ ಸಮಸ್ಯೆಗಳು, ತಾಂತ್ರಿಕ–ಯಾಂತ್ರಿಕ ಸವಲತ್ತುಗಳು ಅವಳಿಗೊಡ್ಡಿರುವ ಸವಾಲುಗಳು ಇಂತಹ ನೂರಾರು ವಿಷಯಗಳು ಇಂದಿನ ಕಥೆಗಳಲ್ಲಿ ಚರ್ಚಿತವಾಗುತ್ತಿವೆ. ಹೆಣ್ಣಿನ ಸ್ವಾಭಿಮಾನ, ಆತ್ಮಗೌರವದಂತಹ ವಿಚಾರಗಳು ಕಥೆಯ ಪ್ರಮುಖ ವಿಷಯಗಳಾಗುತ್ತಿವೆ.

ಮಾಧ್ಯಮಗಳ ಹಾವಳಿಯಲ್ಲಿ ಕಥೆಗಳು, ಪತ್ರಿಕೆ, ಪುಸ್ತಕಗಳಿಗೆ ಮಾತ್ರ ಸೀಮಿತವಾಗದೆ, ಸಂಪದ, ಅವಧಿ, ಪ್ರತಿಲಿಪಿಯಂತಹ ಮಾಧ್ಯಮದ ಹಲವು ವೇದಿಕೆಗಳಲ್ಲಿ ಸ್ಥಾನಪಡೆಯುತ್ತವೆ. ಇಂದಿನ ಯುವಜನತೆ ಓದುವುದರಲ್ಲಿ ಆಸಕ್ತಿ ಕಳೆದುಕೊಂಡಿದೆ ಎನಿಸಿದರೂ, ಕಥಾರಚನೆಗೆ ತೊಡಗಿರುವವರ ಮತ್ತು ಕಥೆಗೆ ಸ್ಪಂದಿಸುವವರ ಸಂಖ್ಯೆಯೇನು ಕಡಿಮೆಯಾಗಿಲ್ಲ. ಇಂದು ಜಯಂತ ಕಾಯ್ಕಿಣಿ, ಜೋಗಿ, ಸುಧಾಕರ, ರಾಘವೇಂದ್ರ ಖಾಸನೀಸ, ಗೀತಾ ವಸಂತ, ಎಚ್. ನಾಗವೇಣಿ, ನೇಮಿಚಂದ್ರ, ಎಚ್.ಆರ್.ಸುಜಾತರಂತಹ ಹಲವಾರು ಪ್ರಮುಖ ಕಥೆಗಾರರನ್ನು

ಗುರುತಿಸಬಹುದಾಗಿದೆ. ಗೀತಾ ವಸಂತ, ಎಚ್.ನಾಗವೇಣಿ, ನೇಮಿಚಂದ್ರ, ಸುಜಾತ ಅವರ ಕಥೆಗಳನ್ನು ಪ್ರಾತಿನಿಧಿಕವಾಗಿ ಇರಿಸಿಕೊಂಡು ಮಹಿಳಾ ಸಂವೇದನೆಯ ದಿಕ್ಕನ್ನು ಗುರುತಿಸಿಕೊಳ್ಳುವ ಪ್ರಯತ್ನ ಇಲ್ಲಿದೆ.

ಎಚ್.ನಾಗವೇಣಿ ಅವರ ಹೊಸ ಕಥನ ಶೈಲಿಯನ್ನು ರೂಢಿಸಿಕೊಂಡಿರುವ ನಾಗವೇಣಿಯವರು ಕರಾವಳಿಯ ಪರಿಸರವನ್ನು ತಮ್ಮ ಕಥೆಗಳಲ್ಲಿ ಆಪ್ತವಾಗಿ ಚಿತ್ರಿಸುತ್ತಾರೆ. ಇವರ ಒಂದು ಪ್ರಸಿದ್ಧ ಕಥೆ 'ಧಣಿಗಳ ಬೆಳ್ಳಿಲೋಟ' ಉಳ್ಳವರು ದುರ್ಬಲರ ಶ್ರಮವನ್ನಾಗಲಿ, ಪ್ರತಿಭೆಯನ್ನಾಗಲಿ ಗೌರವಿಸದೆ, ಅವರ ಪರಿಶ್ರಮದಲ್ಲೇ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಾರೆ. ಶೋಷಿತರ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಹೇಗೆ ಪ್ರತಿರೋಧ ವ್ಯಕ್ತವಾಗುತ್ತದೆ ಎನ್ನುವುದು ಕಥೆಯಲ್ಲಿ ಅನಾವರಣಗೊಂಡಿದೆ. ಹೆಣ್ಣಿನ ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಅವಳ ತಣ್ಣನೆಯ ಪ್ರತಿರೋಧ ಹೇಗಿರುತ್ತದೆ ಎಂಬುದಕ್ಕೆ ಈ ಕಥೆ ಉದಾಹರಣೆಯಂತಿದೆ. "ಕುದುಪ್ಪ ಮತ್ತು ಚಿನ್ನಮ್ಮ ದಂಪತಿಗಳ ಮಗ ಗುಡ್ಡ ವೆಂಕಪ್ಪಯ್ಯ ಧನಿಗಳ ಮನೆಯಲ್ಲಿ ಒಕ್ಕಲಾಗಿ ದುಡಿಯುತ್ತಿದ್ದಾರೆ. ಗುಡ್ಡ ಶಾಂಭವಿ ನದಿಯ ದಡದಲ್ಲಿ ಕುಳಿತು ಮುಸುರೆ ಪಾತ್ರೆಗಳನ್ನು ತೊಳೆಯುತ್ತಿರುತ್ತಾನೆ. ಆಗ ಮಣ್ಣು ಕುಸಿದು ಪಾತ್ರೆಗಳೆಲ್ಲ ನದಿ ಪಾಲಾಗುತ್ತವೆ. ಕುದುಪ ಎಲ್ಲ ಪಾತ್ರೆಗಳನ್ನು ಹುಡುಕಿ ತೆಗೆಯುತ್ತಾನೆ. ಬೆಳ್ಳಿಲೋಟ ಮಾತ್ರ ಸಿಗುವುದೇ ಇಲ್ಲ. ಇವರ ಮಾತನ್ನು ನಂಬದ ಧಣಿಗಳು ಲೋಟ ಕದ್ದ ಅಪವಾದವನ್ನು ಕುದುಪನ ಕುಟುಂಬದ ಮೇಲೆ ಹಾಕಿ, ಬಾಯಿ ಬಿಡಿಸಲು ಗುಡ್ಡನಿಗೆ ಹೊಡೆಯುತ್ತಾರೆ. ಮಗನ ಗೋಳಾಟವನ್ನು ನೋಡಲಾಗದ ಚಿನ್ನಮ್ಮ ಪಡಿಯಿಲ್ಲದೆ ಮೂರು ಬೇಸಿಗೆಗಳವರೆಗೆ ದುಡಿದು ಲೋಟದ ಹಣ ತೀರಿಸುತ್ತೇನೆ, ಎಂಬ ಷರತ್ತಿನ ಮೇಲೆ ಮಗನನ್ನು ಬಿಡಿಸಿಕೊಳ್ಳುತ್ತಾಳೆ. ಮುಂದಿನ ಬೇಸಿಗೆಯಲ್ಲಿ ಹೊಳೆಯ ಹೂಳೆತ್ತಿ ತೋಟಕ್ಕೆ ಹಾಕುವಾಗ ಆ ಲೋಟ ಕುದುಪನ ಕೈಗೆ ಸಿಗುತ್ತದೆ. ಸಂತಸದಿಂದ ಅದನ್ನು ಚನ್ನಮ್ಮನಿಗೆ ಕೊಡುತ್ತಾನೆ. ದೂರದಲ್ಲಿ ನೆರಳಿನಲ್ಲಿ ಕುಳಿತು ಇವರನ್ನು ನೋಡುತ್ತಿದ್ದ ಧಣಿಗಳಿಗೆ ಕಾಣುವಂತೆ ಲೋಟವನ್ನು ಎತ್ತರಿಸಿ ಹಿಡಿದು ನೋಡಿದಳು. ಧಣಿಗಳು ಲೋಟವನ್ನು ಗುರುತಿಸಿದರು, ಮುಖದ ಬೆವರನ್ನು ಒರಸಿಕೊಂಡರು. ಹೊಳೆಯಲ್ಲೇ ಹತ್ತು ಹೆಜ್ಜೆ ಹಾಕಿ ಹನ್ನೊಂದನೇ ಹೆಜ್ಜೆಯಡಿ ನಿಂತವಳು, ಅತ್ತ ದೂರದಲ್ಲಿದ್ದ ಹೊಳೆಯ ಆಳ ಮಡುವತ್ತ ಬೆಳ್ಳಿಲೋಟವನ್ನು ಎಸೆದು ಬಿಟ್ಟಳು. ಕಂಠದಲ್ಲಿ ಬಳ್ಳಿ ಹೊತ್ತ ಆ ಬೆಳ್ಳಿಲೋಟ ತೋಟದಂಚಿನಲ್ಲಿ ನಿಂತು ತನ್ನನ್ನೇ ದಿಟ್ಟಿಸುತ್ತಿದ್ದ ಧಣಿಯರ ಮೋರೆಯ ಅಸಂಖ್ಯ ಭಾವನೆಗಳನ್ನು ಓದುತ್ತಾ ಆಳದ ಮಡುವಲ್ಲಿ ನಿಧಾನವಾಗಿ ಮುಳುಗಿ ಹೋಯ್ತು. ಚನ್ನಮ್ಮ ಹೊಳೆಯ ನೀರಲ್ಲೊಮ್ಮೆ ಸಂಪೂರ್ಣ ಮುಳುಗಿ ಮತ್ತೆ ಎದ್ದು ನಿಂತಳು. ನೆರಳಲ್ಲಿದ್ದ ಧಣಿಯವರು ತಾನು ಹೊದ್ದುಕೊಂಡಿದ್ದ ವಲ್ಲಿಯಿಂದ ಗಾಳಿ ಬೀಸಿಕೊಂಡರು. ಎಂಬಲ್ಲಿಗೆ ಕಥೆ ಮುಗಿಯುತ್ತದೆ." ಕಳ್ಳತನದ ಅಪವಾದದ ನೋವು, ಪಡಿಯಿಲ್ಲದೆ ದುಡಿಯಬೇಕಾದ ಅಸಹಾಯಕತೆ, ಕರುಣೆ, ನಂಬಿಕೆಗಳಿಲ್ಲದ ಧಣಿಗಳ ಶೋಷಣೆಗಳಿಂದ ನೊಂದ ಚನ್ನಮ್ಮ ಬೆಳ್ಳಿಲೋಟವನ್ನು ಧಣಿಗಳಿಗೆ ಒಪ್ಪಿಸಿ ಬಿಡುಗಡೆಯನ್ನು ಬಯಸಲಿಲ್ಲ, ಬದಲಾಗಿ ಧಣಿಗಳು ಮಹತ್ವವಾದದ್ದು ಎಂದು ಭಾವಿಸಿರುವ ಬೆಳ್ಳಿಲೋಟವನ್ನು ನಿರ್ಲಕ್ಷಿಸಿ, ಅದಕ್ಕೆ ತೃಣ ಬೆಲೆಯನ್ನು ನೀಡಿದೆ, ನೀರಿಗೆ ಎಸೆಯುವ ಮೂಲಕ, ಧಣಿಗಳ ಅರ್ಥಹೀನ ಸಂಪತ್ತಿನ ಬೆಲೆಯ ಮಹತ್ವವನ್ನು ಕಳೆಯುತ್ತಾಳೆ. ಆ ಮೂಲಕ ಅವರ ಸಿರಿತನಕ್ಕೆ ಧಿಕ್ಕಾರವನ್ನು ಸೂಚಿಸುವ ಮೂಲಕ ತಣ್ಣನೆಯ ಪ್ರತಿರೋಧವನ್ನು ತೋರುತ್ತಾಳೆ. ಸ್ವಾಭಿಮಾನದಿಂದ ದುಡಿದು ಬದುಕುವ ದಿಟ್ಟ ಹೆಣ್ಣಿನ ಪ್ರತಿನಿಧಿಯಾಗಿ ಚನ್ನಮ್ಮ ಇಲ್ಲಿ ರೂಪುಗೊಂಡಿದ್ದಾಳೆ.

ಗೀತಾ ವಸಂತರವರ 'ಬೇಟೆ' ಕಥೆ ಪ್ರಸ್ತುತ ಸಂದರ್ಭದಲ್ಲಿಯೂ ಹೆಣ್ಣು ಹೇಗೆ

ಶೋಷಣೆಗೆ ಒಳಗಾಗುತ್ತಿದ್ದಾಳೆ. ಹೆಣ್ಣಿನ ಲೈಂಗಿಕತೆ ಗಂಡಿನ ಸುಖಕ್ಕಾಗಿ ಎಂಬ ಭಾವ ನೆಲೆಯೂರಿರುವ ರೀತಿ, ಭಾವನೆಗಳ ಬಲೆಯೊಳಗೆ ಸಿಲುಕಿ ಬಲಿಯಾಗುವ, ಬಂಧಿಯಾಗುವ ಹೆಣ್ಣಿನ ರೀತಿಗಳನ್ನು ಚಿತ್ರಿಸುತ್ತದೆ. ಇಬ್ಬರು ಗೆಳತಿಯರು ಒಬ್ಬಳು ಉನ್ನತ ವರ್ಗದವಳು, ಮತ್ತೊಬ್ಬಳು ಕೆಳವರ್ಗದ ಬಡ ಹೆಣ್ಣುಮಗಳು, ಇಬ್ಬರು ಏನಾದರೂ ಮಾಡಬೇಕು, ಸಾಧಿಸಬೇಕು ಎಂಬ ಕನಸನ್ನು ಹೊತ್ತವರು. ಕಾಲೇಜು ಸೇರುತ್ತಾರೆ. ಉನ್ನತ ವರ್ಗದ ಗೆಳತಿ ಪ್ರೇಮ, ಪ್ರೀತಿಯ ಭಾವನೆಗೆ ಸಿಲುಕಿ ಮದುವೆಯಾಗಿ ಗಂಡನ ಮನೆಯ ಬಂಧನಕ್ಕೆ ಸಿಲುಕಿ ಅಸಹಾಯಕಳಾಗಿ ಗಂಡನ ಬೈಗುಳ, ಹೊಡೆತಗಳನ್ನು ಸಹಿಸಿಕೊಂಡು ಹೊಂದಿಕೊಂಡು ಬದುಕುವ ಗೃಹಿಣಿಯಾಗುತ್ತಾಳೆ.

ಕೆಳವರ್ಗದ ಬಡ ಹುಡುಗಿ ಸುಂದರಿಯಾದ ಜಾನಕಿ ಆಟೋಟಗಳಲ್ಲಿ ಮುಂದಿದ್ದವಳು, ಗಂಡಸರ ಶೋಷಣೆಯಿಂದ ತಪ್ಪಿಸಿಕೊಳ್ಳಲು ಹಳ್ಳಿಯನ್ನು ಬಿಟ್ಟು ಪಟ್ಟಣ ಸೇರಿರುತ್ತಾಳೆ. ಆಕೆಯ ಬಗೆಗೆ ಹಲವಾರು ಊಹಾ–ಪೋಹಗಳು, ಕಥೆಗಳು ಹರಿದಾಡುತ್ತವೆ. ಆದರೆ ಆಕೆ ಎಲ್ಲಿದ್ದಾಳೆ, ಹೇಗಿದ್ದಾಳೆ ಎಂದು ತಿಳಿಯದ ಗೆಳತಿ, ಒಮ್ಮೆ ಟಿ.ವಿಯ ಜೀವವನ್ನು ಪಣಕ್ಕಿಟ್ಟು ಆಡುವ ಆಟದ ಕಾರ್ಯಕ್ರಮದಲ್ಲಿ ಜಾನಕಿಯನ್ನು ಕಾಣುತ್ತಾಳೆ. ಅವಳೊಬ್ಬ ಪ್ರಸಿದ್ಧ ನಟಿಯಾಗಿ ಬೆಳೆದಿರುತ್ತಾಳೆ. ಅವಳ ಅಂದಚಂದದ ಮೇಲೆ ಕ್ಯಾಮೆರಾ ಕಣ್ಣು ಹರಿದಾಡುವುದನ್ನು ಕಥೆಗಾರ್ತಿ ಒತ್ತಿ ಹೇಳುತ್ತಾರೆ. ಆ ಮೂಲಕ ಸಮಾಜ ಹೆಣ್ಣಿನಲ್ಲಿ ಬಯಸುವುದೇನು ಎಂಬುವುದನ್ನು ಸೂಚ್ಯವಾಗಿ ಸೂಚಿಸುತ್ತಾರೆ. ಗೆಳತಿಯನ್ನು ಗುರುತಿಸಿದ ಪ್ರತಿಭಾ ತನ್ನ ಆತ್ಮೀಯ ಗೆಳತಿಯ ವಿಳಾಸವನ್ನು ಹುಡುಕಿ ಪತ್ರ ಬರೆಯುತ್ತಾಳೆ. "ಜೀವದ ಗೆಳತಿ ಜಾನಕಿ, ಹೇಗಿದ್ದವಳು ಹೇಗಾಗಿ ಹೋದೆ? ಹೀಗೇಕೆ? ನಿನ್ನ ಕನಸುಗಳೆಲ್ಲ ಏನಾದವು? ನಿನ್ನ ಆದರ್ಶಗಳಿಗೆಲ್ಲ ನೀನು ಅಪಚಾರ ಮಾಡ್ತಾ ಇದ್ದಿಯಾ ಅಂತ ಅನಿಸೋದಿಲ್ವಾ? ಇದು ನಿಜಕ್ಕೂ ನಿನ್ನದೇ ಜೀವದ ಬೇಟೆ ಅನಿಸೋದಿಲ್ವಾ? ಟಿ.ವಿಯಲ್ಲಿ ನಿನ್ನ ಕಂಡು ದಿಗ್ಭ್ರಾಂತಳಾದೆ, ಇತ್ತೀಚೆಗೆ ನೀನು ಕುಣಿಯುವ ಸಾಂಗ್ ನೋಡಿದೆ. ಎಂಬಿತ್ಯಾದಿ ವಿಷಯಗಳನ್ನು ಒಳಗೊಂಡಂತೆ ಸಾಧ್ಯವಾದರೆ ಈ ಕಡೆ ಬಂದಾಗ ನನ್ನ ಹುಬ್ಬಳ್ಳಿ ಮನೆಗೆ ಬಾ. ಎಂದು ಬರೆಯುತ್ತಾಳೆ." ಎಂದು ಪ್ರತಿಭಾ ಬರೆದ ಪತ್ರಕ್ಕೆ ಪ್ರತಿಯಾಗಿ ಜಾನಕಿಯಿಂದ ಫೋನ್ ಕರೆ ಮತ್ತು ಪತ್ರಗಳು ಬರುತ್ತವೆ.

ರೂಪ, ರಸ, ಗಂಧಗಳು ಸೇರಿ ಪ್ರಕೃತಿ, ಮೂಳೆ, ಮಾಂಸ, ರಕ್ತ, ಚರ್ಮಗಳು ಸೇರಿ ಪ್ರಾಣಿ, ಮನುಷ್ಯ, ಮಾಂಸಭಾಗ ಹೆಚ್ಚಾಗಿದ್ದರೆ ಹೆಣ್ಣು ಇದೇನು ಜೀವನಶಾಸ್ತ್ರ ಪಾಠ ಮಾಡ್ತಾಳೆ ಅಂದ್ಕೊಂಡೆಯಾ? ಇವುಗಳ ಮಧ್ಯೆ ನೀನು ಹೇಳುವ ಆತ್ಮ ಎಲ್ಲಿದೆ ಮಾರಾಯ್ತಿ? ಇನ್ನು ಬೇಟೆಯ ಬಗ್ಗೆ ನಮ್ಮವರಿಗದು ತಲೆತಲಾಂತರದ ಕ್ರೀಡೆ, ಬೇಟೆಯಿಲ್ಲದ ಪುರಾಣ, ಇತಿಹಾಸ, ಕಾವ್ಯಗಳು ಇವೆಯಾ? ನನ್ನಜ್ಜಿ ಮಾಂಕಾಳಿಯನ್ನು ಇಡೀ ಊರೇ ಬೇಟಿಯಾಡಿತು. ಬೇಟೆಗೆ ಒಳಗಾದ ಜೀವಕ್ಕೆ ಎಲ್ಲಿ ಮಾತಾಡಲು ಅವಕಾಶವಿತ್ತು? ನನ್ನ ಅಮ್ಮನನ್ನು ಬೇಟೆಯಾಡಿತು. ಈಗ ನಾವೆಲ್ಲ ತಲೆಯೆತ್ತಿ ನಿಲ್ಲಬೇಕು, ಮತ್ತೆ ಈ ದೇಹ ವಯಸ್ಸಾದರೆ ಸುಕ್ಕಾಗುತ್ತದೆ, ನಶಿಸಿ ಹೋಗುತ್ತದೆ. ಸಾವಿನ ಅಂಚಿನಲ್ಲಿ ಜೀವದ ಜೋಲಿಯಾಡುವುದು ನಮಗೇನು ಹೊಸದೆ? ಇನ್ನು ನಮ್ಮ ಕನಸುಗಳಿಗೆ ಎಂದಾದರು ಬೆಲೆಯಿತ್ತೆ? ಎಂಬಿತ್ಯಾದಿ ಪ್ರಶ್ನೆಗಳು ನಮ್ಮ ಎದುರು ಬಂದು ನಿಲ್ಲುತ್ತವೆ.

ಆಧುನಿಕ ಕಾಲದ ಹೆಣ್ಣಿನ ಸಮಸ್ಯೆಗಳು ಸುಪ್ತವಾಗಿ ಹಾಗೆಯೇ ಉಳಿದಿರುವ ರೀತಿಯನ್ನು ಅವಳ ಎಚ್ಚೆತ್ತ ಮನಸ್ಸು, ಜಾಗೃತಗೊಂಡ ಜಾಣ್ಮೆ, ಸ್ವಾಭಿಮಾನ, ಆತ್ಮಗೌರವ, ಪ್ರತಿರೋಧ, ಅಸಹಾಯಕತೆಯನ್ನು ಮೆಟ್ಟಿ ನಿಲ್ಲುವ ಛಲ, ಬದುಕಿನ ಅಸ್ತೆ, ಜೀವನ್ಮುಖಿತ್ವ

ಇವುಗಳು ಕಥೆಗಳಲ್ಲಿ ನಿರೂಪಣೆಗೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಸಾಮಾನ್ಯ ಮನುಷ್ಯ ಮತ್ತು ಬದುಕು ಸಾಹಿತ್ಯದ ಕೇಂದ್ರವಾಗಿ ಜನಸಾಮಾನ್ಯರ ಭಾಷೆಯಲ್ಲಿಯೇ ಸಾಹಿತ್ಯ ಇಲ್ಲಿ ಅಭಿವ್ಯಕ್ತಗೊಂಡಿತು. ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಇತ್ಯಾದಿ ಕಾಲಘಟ್ಟಗಳಲ್ಲಿ ಈ ಶತಮಾನದ ಸಾಹಿತ್ಯ ಪ್ರಭಾವ, ಪ್ರೇರಣೆ, ಸೈದ್ಧಾಂತಿಕ, ತಾತ್ವಿಕ, ವೈವಿಧ್ಯತೆಯಲ್ಲಿ ವಿಶಿಷ್ಟವಾಗಿ ರೂಪುಗೊಂಡಿತು.

**ಪರಾಮರ್ಶನ ಗ್ರಂಥಗಳು:**

1. ನೇಮಿಚಂದ್ರ, (2006), ಬದುಕು ಬದಲಿಸಬಹುದು, ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್.
2. ಪಠ್ಯಪುಸ್ತಕ ರಚನಾ ಸಮಿತಿ, (2016), ಸಾಹಿತ್ಯ ಸಂಪದ (ದ್ವಿತೀಯ ಪಿಯುಸಿ ಕನ್ನಡ ಪಠ್ಯಪುಸ್ತಕ), ಬೆಂಗಳೂರು: ಪದವಿ ಪೂರ್ವ ಶಿಕ್ಷಣ ಇಲಾಖೆ (ಕರ್ನಾಟಕ ಸರ್ಕಾರ).
3. ರಾಧಾದೇವಿ ಹೆಚ್. ಜಿ., (1994), ಅದೃಷ್ಟದ ಅಂಚಿನಲ್ಲಿ, ಬೆಂಗಳೂರು: ಕೀರ್ತಿ ಪ್ರಕಾಶನ.
4. ರಾಧಾದೇವಿ ಹೆಚ್. ಜಿ., (1981), ಗೆಲುವಿನ ಹಾದಿ, ಬೆಂಗಳೂರು: ಓಂ ಶಕ್ತಿ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.